**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕೊಪ್ಪ**

**ಸಿ.ಸಿ. ನಂಃ 114/2020**

**ಫಿರ್ಯಾದುದಾರರು** ಃ ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರ ನಿಯಮಿತ(ರಿ),
ಮುಖ್ಯ ರಸ್ತೆ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ,
ಪ್ರತಿನಿಧಿಸಿದವರುಃ ಅಧಿಕಾರಿ,
ಶ್ರೀ. ಕೆ.ಪಿ. ನಾಗರಾಜ, ಬಿನ್. ಪುರುಷೋತ್ತಮ್.

ಃವಿಃ

**ಆರೋಪಿತರು** ಃ ಶ್ರೀ. ಕೃಷ್ಣ ಶೆಟ್ಟಿ, ಬಿನ್. ಚಂದ್ರಶೇಖರ ಶೆಟ್ಟಿ,
ವಾಸಃ ತೆಂಗಿನಮನೆ, ಕರಿಮನೆ ಅಂಚೆ,
ಕೊಪ್ಪ ತಾಲ್ಲೂಕು 577123,
ಚಿಕ್ಕಮಗಳೂರು ಜಿಲ್ಲೆ.

- - -

**ಆ ಪಾ ದ ನೆ**

ಆರೋಪಿಯಾದ ನಿಮ್ಮ ವಿರುದ್ಧ ಫಿರ್ಯಾದುದಾರರು ದಾಖಲು ಮಾಡಿರುವ ಫಿರ್ಯಾದು ಏನೆಂದರೆ, ನೀವು ಆರೋಪಿ 80,000/- ರೂ.ಗಳ 21.11.2019ನೇ ದಿನಾಂಕವನ್ನು ನಮೂದಿಸಿರುವ, 020089ನೇ ಸಂಖ್ಯೆಯ, ಕಾವೇರಿ ಗ್ರಾಮೀಣ ಬ್ಯಾಂಕ್, ಜಯಪುರ ಶಾಖೆಯ ಒಂದು ಚೆಕ್ಕನ್ನು ಫಿರ್ಯಾದುದಾರರಿಗೆ ಕೊಡಬೇಕಾದ ಹಣದ ಬಾಬ್ತು ನಗದೀಕರಣಕ್ಕಾಗಿ ನೀಡಿದ್ದು, ಫಿರ್ಯಾದುದಾರರು ಅದನ್ನು ಜಮಾವಣೆಗಾಗಿ ಬ್ಯಾಂಕಿನಲ್ಲಿ ಹಾಜರುಪಡಿಸಿದಾಗ, ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂಬ ಹಿಂಬರಹದೊಂದಿಗೆ ಅದನ್ನು ವಾಪಾಸು ಮಾಡಿರುತ್ತಾರೆ ಹಾಗೂ ಈ ಬಗ್ಗೆ ನಿಮಗೆ ವಕೀಲರ ಮೂಲಕ ನೋಟೀಸನ್ನು ಕೊಟ್ಟರೂ ಸಹಾ

ನೀವು ಆರೋಪಿ ಚೆಕ್ಕಿನಲ್ಲಿ ಒಳಗೊಂಡ ಹಣವನ್ನು ಮರುಪಾವತಿ ಮಾಡಿರುವುದಿಲ್ಲ, ಆದ್ದರಿಂದ, ನೀವು ಆರೋಪಿ ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಈ ರೀತಿಯ ಚೆಕ್ಕನ್ನು ನೀಡಿ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಪ್ರ:1: ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉ: ತಿಳಿಯಿತು

ಪ್ರ:2: ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉ: ವಿಚಾರಣೆ ಆಗಬೇಕು

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ: 20ನೇ ದಿವಸ,. ಸೆಪ್ಟೆಂಬರ್ ಮಾಹೆ, 2021.

(ಪ್ರಿಯಾ ರವಿ ಜೋಗಳೆಕರ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ;ಕೊಪ್ಪ.